ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **1336(1558)**

ವಿಧಾನ ಪರಿಷತ್ತು ಸದಸ್ಯರ ಹೆಸರು : ಶ್ರೀ ಕಾಂತರಾಜ್ (ಬಿಎಂಎಲ್)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ದಿನಾಂಕ : **24-09-2021**

ಉತ್ತರಿಸುವವರು : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

ಕ್ರ. ಸಂ.	ಪ್ರಶ್ನೆಗಳು	ಉತ್ತರ
ಅ)	ಕರ್ನಾಟಕ ರಾಜ್ಯ ಜೈವಿಕ ಇಂಧನ ಮಂಡಳಿಯನ್ನು ಯಾವಾಗ ಸ್ಥಾಪನೆ ಮಾಡಲಾಯಿತು; ಇದರ ರೂಪುರೇಷೆಗಳೇನು; ಇಲ್ಲಿಯವರೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬಿಡುಗಡೆ ಮಾಡಿರುವ ಹಣವೆಷ್ಟು; (ವಿವರವಾದ ಮಾಹಿತಿ ನೀಡುವುದು)	ಕರ್ನಾಟಕ ರಾಜ್ಯ ಜೈವಿಕ ಇಂಧನ ಮಂಡಳಿಯನ್ನು ದಿನಾಂಕ: 06-12-2010ರಲ್ಲಿ ಸ್ಥಾಪನೆ ಮಾಡಲಾಗಿದೆ. ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ರೂಪರೇಷೆಗಳು ಈ ಕೆಳಕಂಡಂತಿವೆ. • ಜೈವಿಕ ಇಂಧನ ಮೂಲಗಳ ಅಭಿವೃದ್ಧಿ ಹಾಗೂ ನಿರಂತರ ಪೂರೈಕೆಗೆ ಪೂರಕ ಪರಿಸರ ನಿರ್ಮಾಣ. • ರಾಜ್ಯ ಜೈವಿಕ ಇಂಧನ ನೀತಿಯ ಸಮರ್ಪಕ ಅನುಷ್ಠಾನ. • ಆಹಾರ ಭದ್ರತೆಗೆ ಧಕ್ಕೆಯಾಗದಂತೆ ನಿಗಾವಹಿಸಿ ಜೈವಿಕ ಇಂಧನ ಕ್ಷೇತ್ರ ಅಭಿವೃದ್ಧಿಪಡಿಸುವುದು. • ಜೈವಿಕ ಇಂಧನ ಬೆಳೆ ಬೆಳೆಯಲು ರೈತರನ್ನು ಪ್ರೇರೇಪಿಸುವುದು, • ಜೈವಿಕ ಇಂಧನ ಸಂಶೋಧನೆ ಮತ್ತು ಅಭಿವೃದ್ಧಿಗೆ ಪ್ರೋತ್ಸಾಹ ನೀಡುವುದು. • ಮೌಲ್ಯವರ್ಧನಾ ಚಟುವಟಿಕೆಗಳನ್ನು ಕೈಗೊಳ್ಳುವುದು. • ಮಾಹಿತಿ ಹಾಗೂ ತಂತ್ರಜ್ಞಾನಗಳ ಬಳಕೆಯಿಂದ ಜೈವಿಕ ಇಂಧನ ಕ್ಷೇತ್ರ ಅಭಿವೃದ್ಧಿಗೊಳಿಸುವುದು. ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯು ಸರ್ವ ಸದಸ್ಯ ಸಮಿತಿ ಹಾಗೂ ಆಡಳಿತ ಮಂಡಳಿಯ ಸಾಂಸ್ಥಿಕ ಸ್ವರೂಪ ಹಾಗೂ ರೂಪುರೇಷೆಗಳು ಕೆಳಕಂಡಂತಿವೆ. **ಸರ್ವ ಸದಸ್ಯ ಸಮಿತಿ :** ಕರ್ನಾಟಕ ರಾಜ್ಯ ಜೈವಿಕ ಇಂಧನ ನೀತಿಯ ಅನುಷ್ಠಾನದ ಉಸ್ತುವಾರಿ ನಿರ್ವಹಿಸಲು ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯನ್ನು ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರ ಅಧ್ಯಕ್ಷತೆಯಲ್ಲಿ ಹಾಗೂ ರಾಜ್ಯ ಯೋಜನಾ ಮಂಡಳಿಯ ಮಾನ್ಯ ಅಧ್ಯಕ್ಷರನ್ನು ಉಪಾಧ್ಯಕ್ಷರನ್ನಾಗಿ ನೇಮಿಸಿ ರಚಿಸಲಾಗಿರುತ್ತದೆ. ಹಾಗೆಯೇ 8 ಜನ ಸಚಿವರು ಹಾಗೂ ಮಂಡಳಿಯ ಕಾರ್ಯಕಾರಿ ಸಮಿತಿ ಅಧ್ಯಕ್ಷರು, 21 ಜನ ಅಧಿಕಾರಿ ಸದಸ್ಯರು, 6 ಜನ ನಾಮ ನಿರ್ದೇಶನಗೊಂಡ ಸದಸ್ಯರು ಹಾಗೂ 11 ಜನ ಕಾರ್ಯಕಾರಿ ಸಮಿತಿ ಸದಸ್ಯರನ್ನೊಳಗೊಂಡಿರುತ್ತದೆ. ಮಂಡಳಿಯ ವ್ಯವಸ್ಥಾಪಕ ನಿರ್ದೇಶಕರು ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ. ವಾರ್ಷಿಕ ಸರ್ವ ಸದಸ್ಯ ಸಮಿತಿ ಸಭೆಯಲ್ಲಿ ಮಂಡಳಿಯ ವಾರ್ಷಿಕ ಚಟುವಟಿಕೆಗಳು, ಲೆಕ್ಕಪತ್ರ, ಮುಂದಿನ ಕ್ರಿಯಾ ಯೋಜನೆ ಮತ್ತು ವಿಶೇಷ ಯೋಜನೆಗಳ ಪರಿಶೀಲನೆಯಾಗುತ್ತದೆ.

<table>
<tr>
<td></td>
<td></td>
<td>
ಕಾರ್ಯಕಾರಿ ಸಮಿತಿ /.ಆಡಳಿತ ಮಂಡಳಿ ರಚನೆ :
ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಕಾರ್ಯಕಾರಿ ಸಮಿತಿ ಆಡಳಿತ ಮಂಡಳಿಯಾಗಿರುತ್ತದೆ. ಆಡಳಿತ ಮಂಡಳಿಯು ಅಧ್ಯಕ್ಷರನ್ನೊಳಗೊಂಡಂತೆ 8 ಜನ ಅಧಿಕಾರೇತರ ಸದಸ್ಯರು, 5 ಜನ ಸಹ ಸದಸ್ಯರು ಹಾಗೂ 11 ಜನ ಅಧಿಕಾರಿ ಸದಸ್ಯರುಗಳನ್ನೊಳಗೊಂಡಿರುತ್ತದೆ. ಪ್ರತಿ ತ್ರೈಮಾಸಿಕಕ್ಕೊಮ್ಮೆ ಕಾರ್ಯಕಾರಿ ಸಮಿತಿ ಸಭೆ ಜರುಗುವುದು. ಮಂಡಳಿಯ ಕಾರ್ಯ ಚಟುವಟಿಕೆಗಳ ಪರಿಶೀಲನೆ, ಹೊಸ ಕಾರ್ಯ ಯೋಜನೆಗಳ ಅನುಮೋದನೆ, ಅನುಷ್ಠಾನ, ಹಣಕಾಸು ವಿಷಯಗಳ ಅನುಮೋದನೆ ಮತ್ತು ನೀತಿ ನಿರೂಪಣೆ ಕಾರ್ಯಗಳನ್ನು ಕೈಗೊಳ್ಳುವುದು.
ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಗೆ ಜೈವಿಕ ಇಂಧನ ಕಾರ್ಯಯೋಜನೆಗಳ ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರದಿಂದ ಹಣಕಾಸು ನೆರವು ದೊರೆತಿರುವುದಿಲ್ಲ. ರಾಜ್ಯ ಸರ್ಕಾರದಿಂದ ಜೈವಿಕ ಇಂಧನ ಕಾರ್ಯಯೋಜನೆಗಳ ಅನುಷ್ಠಾನಕ್ಕಾಗಿ ದೊರೆತಿರುವ ಅನುದಾನದ ವಿವರಗಳು ಕೆಳಕಂಡಂತಿವೆ;
(ರೂ. ಲಕ್ಷಗಳಲ್ಲಿ)
<table>
<tr><th>ಕ್ರ ಸಂ</th><th>ಹಣಕಾಸು ವರ್ಷ</th><th>ಮಂಜೂರಾದ ಅನುದಾನ</th><th>ಬಿಡುಗಡೆಯಾದ ಅನುದಾನ</th></tr>
<tr><td>1.</td><td>2010-11</td><td>725.00</td><td>379.17</td></tr>
<tr><td>2.</td><td>2011-12</td><td>1,000.00</td><td>750.00</td></tr>
<tr><td>3.</td><td>2012-13</td><td>1,000.00</td><td>1,000.00</td></tr>
<tr><td>4.</td><td>2013-14</td><td>400.00</td><td>300.00</td></tr>
<tr><td>5.</td><td>2014-15</td><td>130.00</td><td>330.00 (ಹೆಚ್ಚುವರಿ ಅನುದಾನ 200.00 ಸೇರಿ)</td></tr>
<tr><td>6.</td><td>2015-16</td><td>150.00</td><td>350.00 (ಹೆಚ್ಚುವರಿ ಅನುದಾನ 200.00 ಸೇರಿ)</td></tr>
<tr><td>7.</td><td>2016-17</td><td>181.00</td><td>387.00 (ಹೆಚ್ಚುವರಿ ಅನುದಾನ 206.00 ಸೇರಿ)</td></tr>
<tr><td>8.</td><td>2017-18</td><td>681.00</td><td>887.00 (ಹೆಚ್ಚುವರಿ ಅನುದಾನ 206.00 ಸೇರಿ)</td></tr>
<tr><td>9.</td><td>2018-19</td><td>387.00</td><td>387.00</td></tr>
<tr><td>10.</td><td>2019-20</td><td>420.00</td><td>420.00</td></tr>
<tr><td>11.</td><td>2020-21</td><td>130.00</td><td>130.00</td></tr>
<tr><td>12</td><td>2021-22</td><td>300.00</td><td>22.9.2021 ರ ವರೆಗೆ ಅನುದಾನ ಬಿಡುಗಡೆ ಯಾಗಿರುವುದಿಲ್ಲ.</td></tr>
</table>
</td>
</tr>
<tr>
<td>ಆ)</td>
<td>ರಾಜ್ಯದಲ್ಲಿ ಜೈವಿಕ ನೀತಿ ಏನಿದೆ; (ವಿವರವಾದ ಮಾಹಿತಿಯನ್ನು ನೀಡುವುದು)</td>
<td>ಜೈವಿಕ ಇಂಧನವನ್ನು ಸಸ್ಯ ಹಾಗೂ ಪ್ರಾಣಿ ಜನ್ಯ ವಸ್ತುಗಳಿಂದ ಉತ್ಪಾದಿಸಲಾಗುತ್ತದೆ. ಇದು ಉತ್ತಮವಾದ ನವೀಕರಿಸಬಹುದಾದ ಇಂಧನವಾಗಿರುತ್ತದೆ. ಬಯೋಡೀಸೆಲ್ ಮತ್ತು ಎಥನಾಲ್‌ಗಳ ಉತ್ಪಾದನೆ ಹಾಗೂ ಬಳಕೆಗೆ ವಿಶ್ವದಾದ್ಯಂತ ಮನ್ನಣೆ ದೊರೆತಿದೆ. ಜೈವಿಕ ಇಂಧನ ಬಳಕೆಯಿಂದ ಏರುತ್ತಿರುವ ಜಾಗತಿಕ ತಾಪಮಾನ ನಿಯಂತ್ರಣ, ಪರಿಸರ ರಕ್ಷಣೆ, ಇಂಧನದ ಆಮದು ಪ್ರಮಾಣವನ್ನು ಕಡಿತಗೊಳಿಸುವಿಕೆ, ಗ್ರಾಮೀಣಮಟ್ಟದಲ್ಲಿ ಉದ್ಯೋಗ ಸೃಜನೆ ಮತ್ತು ಆರ್ಥಿಕ ಬಲವರ್ಧನೆಗಳಿಗೆ ಸಹಕಾರಿಯಾಗಲಿದೆ.</td>
</tr>
</table>

ಹೆಚ್ಚುತ್ತಿರುವ ಕಚ್ಚಾತೈಲಗಳ ಬೇಡಿಕೆಯಿಂದಾಗಿ ಭೂಮಿಯಲ್ಲಿನ ತೈಲ ನಿಕ್ಷೇಪಗಳು ಬರಿದಾಗುತ್ತಿವೆ. ಭಾರತ ದೇಶವು ಶೇ.80ರಷ್ಟು ಪೆಟ್ರೋಲಿಯಂ ಉತ್ಪನ್ನಗಳನ್ನು ಹೊರದೇಶಗಳಿಂದ ಆಮದು ಮಾಡಿಕೊಳ್ಳುತ್ತಿದೆ. ಇದರ ಪರಿಣಾಮವಾಗಿ ಇಂಧನದ ಪರಾವಲಂಬನೆ, ಪರಿಸರ ಮಾಲಿನ್ಯ, ವಿದೇಶಿ ವಿನಿಮಯಗಳ ಹೊರೆ ಹೆಚ್ಚುತ್ತಾ ಸಾಗುತ್ತಿದೆ. ಈ ಎಲ್ಲಾ ದೃಷ್ಟಿಯಿಂದ ಬದಲೀ ಇಂಧನ ಮೂಲಗಳಿಗೆ ಪ್ರಾಮುಖ್ಯತೆ ದೊರೆಯುತ್ತಿದ್ದು ಭವಿಷ್ಯದ ಇಂಧನವಾಗಿ ಜೈವಿಕ ಇಂಧನವನ್ನು ಅಭಿವೃದ್ಧಿ ಪಡಿಸುವುದು ಇಂದಿನ ಅವಶ್ಯವಾಗಿದೆ. ಆದುದರಿಂದ ಪರ್ಯಾಯ ಇಂಧನದ ಮೂಲಗಳ ಅನ್ವೇಷಣೆ ಹಾಗೂ ಬಳಕೆ ಅವಶ್ಯ ಮತ್ತು ಅನಿವಾರ್ಯವೆನಿಸಿದ್ದು, 'ಜೈವಿಕ ಇಂಧನ' ಇಂದಿನ ಹಾಗೂ ಮುಂದಿನ ಜನಾಂಗಕ್ಕೆ ವರದಾನವಾಗಬಲ್ಲ ಇಂಧನ ಸಂಪನ್ಮೂಲವೆನಿಸಿದೆ.

ಜೈವಿಕ ಇಂಧನ ನೀತಿ – 2009 ರ ಮಹತ್ವದ ಅಂಶಗಳು:

- ಜೈವಿಕ ಇಂಧನ ಉತ್ಪಾದನೆಗೆ ಅಖಾದ್ಯ ತೈಲ ಬೀಜಗಳ ಸಂಗ್ರಹಣೆಯನ್ನು ಸಮುದಾಯಗಳು, ಸ್ವ-ಸಹಾಯ ಮಹಿಳಾ ಗುಂಪುಗಳು ಹಾಗೂ ಬಳಕೆದಾರರ ಸಂಘಗಳನ್ನು ತೊಡಗಿಸಿಕೊಂಡು ಕೈಗೊಳ್ಳುವುದು. ಜೈವಿಕ ಇಂಧನ ಸಸಿಗಳನ್ನು ಒಣಭೂಮಿ, ಬಂಜರುಭೂಮಿ ಹಾಗೂ ಕೃಷಿಗೆ ಯೋಗ್ಯವಲ್ಲದ ಜಮೀನುಗಳಲ್ಲಿ ಬೆಳೆಸುವುದು. ಈ ಭೂಮಿಗಳಲ್ಲಿ ಬೆಳೆಯುವ ಅಖಾದ್ಯ ತೈಲ ಬೀಜಗಳಿಂದ ಬಯೋಡೀಸೆಲ್ ಉತ್ಪಾದಿಸುವುದು.
- ಜೈವಿಕ ಇಂಧನ ಉತ್ಪಾದನೆ, ಎಣ್ಣೆ ತೆಗೆದ ನಂತರ ಬರುವ ಹಿಂಡಿಯನ್ನು ಜೈವಿಕ ಗೊಬ್ಬರವನ್ನಾಗಿ ಬಳಸುವುದು.
- ಜೈವಿಕ ಇಂದನ ಕುರಿತ ಸಂಶೋಧನೆ ಮತ್ತು ಅಭಿವೃದ್ಧಿಗೆ ಆದ್ಯತೆ.

ಇ) ರಾಜ್ಯದಲ್ಲಿ ಜೈವಿಕ ಇಂಧನ ಉತ್ಪಾದನೆ ಮಾಡುವ ಉದ್ಯಮಗಳು ಎಷ್ಟಿವೆ; ಅವು ಯಾವುವು; (ಜಿಲ್ಲಾವಾರು ವಿವರವಾದ ಮಾಹಿತಿಯನ್ನು ನೀಡುವುದು)

ಪ್ರಸ್ತುತ ರಾಜ್ಯದಲ್ಲಿ ಜೈವಿಕ ಇಂಧನ (ಬಯೋಡೀಸಲ್) ಉತ್ಪಾದನೆಯಲ್ಲಿ ತೊಡಗಿರುವ ಉದ್ಯಮಗಳ ವಿವರಗಳು ಕೆಳಕಂಡಂತಿವೆ.

ಕ್ರಸಂ	ಉದ್ಯಮದ ಹೆಸರು ಮತ್ತು ವಿಳಾಸ	ಜಿಲ್ಲೆ	ಉತ್ಪಾದನಾ ಸಾಮರ್ಥ್ಯ ಪ್ರತಿ ದಿನಕ್ಕೆ (ಲೀಟರ್ ಗಳಲ್ಲಿ)
1.	ಮೆ. ಇಕೋ ಗ್ರೀನ್ ಫ್ಯೂಯಲ್ಸ್ (ಪ್ರೈ) ಲಿ., ವಸಂತನರಸಾಪುರ ಕೈಗಾರಿಕಾ ಪ್ರದೇಶ, ತುಮಕೂರು ಜಿಲ್ಲೆ.	ತುಮಕೂರು	40,000
2.	ಮೆ. ಪೈರಿನ್ ಇಂಡಸ್ಟ್ರೀಸ್, ಕನಕಪುರ ರಸ್ತೆ, ಬೆಂಗಳೂರು.	ಬೆಂಗಳೂರು	10,000
3.	ಮೆ. ಟ್ರಾನ್ಸ್‌ಬಿಲ್ಲೆ, ಬಾಗಲಕೋಟೆ, ಬಾಗಲಕೋಟೆ ಜಿಲ್ಲೆ.	ಬಾಗಲಕೋಟೆ	24,000
4.	ಮೆ. ಕರ್ನಾಟಕ ಬಯೋಫ್ಯೂಯಲ್ಸ್, ಧಾರವಾಡ	ಧಾರವಾಡ	15,000

ಈ)	ಸರ್ಕಾರಿ ಗೋಮಾಳ ಹಾಗೂ ಇತರೆ ವ್ಯವಸಾಯಕ್ಕೆ ಯೋಗ್ಯವಲ್ಲದ ಜಮೀನನ್ನು ಜೈವಿಕ ಇಂಧನ ಸಸಿ ಬೆಳೆಸಲು ಸಂಘ ಸಂಸ್ಥೆಗಳಿಗೆ ಗುತ್ತಿಗೆ ನೀಡಲು ಅವಕಾಶವಿದೆಯೇ; ಅದರ ಪ್ರತಿಯನ್ನು ಒದಗಿಸುವುದು;	ಇಲ್ಲ.
ಉ)	ಇಲ್ಲಿಯವರೆಗೆ ಈ ರೀತಿ ಎಷ್ಟು ಸಂಘ ಸಂಸ್ಥೆಗಳಿಗೆ ಜಮೀನು ನೀಡಲಾಗಿದೆ; (ವಿವರವಾದ ಮಾಹಿತಿಯನ್ನು ನೀಡುವುದು)	ಉದ್ಭವಿಸುವುದಿಲ್ಲ.
ಊ)	ಜೈವಿಕ ಇಂಧನ ಮಂಡಳಿಯಲ್ಲಿ ಇಲ್ಲಿಯವರೆಗೆ ನೋಂದಾಯಿಸಿಕೊಂಡಿರುವ ಸಂಘ ಸಂಸ್ಥೆಗಳು ಹಾಗೂ ಇತರೆ ಸಂಸ್ಥೆಗಳಾವುವು? (ವಿಳಾಸದೊಂದಿಗೆ ಸಂಪೂರ್ಣ ಮಾಹಿತಿಯನ್ನು ನೀಡುವುದು)	ಜೈವಿಕ ಇಂಧನ ಮಂಡಳಿಯಲ್ಲಿ ಇಲ್ಲಿಯವರೆಗೆ ಯಾವುದೇ ಸಂಘ ಸಂಸ್ಥೆಗಳು ಹಾಗೂ ಇತರೆ ಸಂಸ್ಥೆಗಳು ನೊಂದಣಿಯಾಗಿರುವುದಿಲ್ಲ.

ಸಂಖ್ಯೆ: ಗ್ರಾಅಪಂರಾ 414 ಜಿಪಸ 2021

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು